**4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ ಧಾರವಾಡ.**

ಸಿ ಸಿ ನಂ.3386/2023

**ಪಿರ್ಯಾದುದಾರರುಃ** ರಾಘವೇಂದ್ರ ಮಹಾದೇವಪ್ಪ ಘಟ್ಟದ

ವಿರುದ್ಧ

**ಆರೋಪಿಃ** ವಿಶಾಲ್ ರಾಜು ಹೊಂಗಲ್

**-ಃಆಪಾದನೆಃ-**

ಆರೋಪಿಯಾದ ನೀವು ಪಿರ್ಯಾದುದಾರನೊಂದಿಗೆ ಹಲವು ವರ್ಷಗಳಿಂದ ಪರಿಚಯಸ್ಥನಾಗಿದ್ದು, ಆರೋಪಿಯಾದ ನೀವು ನಿಮ್ಮ ಅಡಚಣೆಗಾಗಿ ರೂ.8,00,000/- ಕೈ ಗಡ ಸಾಲವನ್ನು ದೂರುದಾರನಿಂದ 3 ವರ್ಷಗಳ ಒಳಗಾಗಿ ಮರಳಿಸುವುದಾಗಿ ಹೇಳಿ ಪಡೆದಿದ್ದು, ಸದರಿ ಸಾಲವನ್ನು ನೀವು 2020 ರ ಪೆಬ್ರುವರಿ ತಿಂಗಳಿನ ಮೊದಲನೇ ವಾರದಲ್ಲಿ ಪಡೆದಿದ್ದು ಸದರಿ ಮೂರು ವರ್ಷಗಳ ಮುಕ್ತಾಯದ ನಂತರ ದೂರುದಾರ ಸದರಿ ಹಣವನ್ನು ಮರುಪಾವತಿಸುವಂತೆ ಕೇಳಿಕೊಂಡಾಗ ನೀವು ನಿಮ್ಮ ಬಾಬ್ತು ಚೆಕ್ಕ ನಂ.030424 ನೇದ್ದನ್ನು ರೂ.8,00,000/-ಕ್ಕೆ ಜುಲೈ 2023 ರ ಮೊದಲನೇ ವಾರದಲ್ಲಿ ನೀಡಿ ದಿಃ 17.07.2023 ರ ನಂತರ ನಗದಿಕರಣಕ್ಕಾಗಿ ಹಾಜರುಪಡಿಸಡುವಂತೆ ಸೂಚಿಸಿದ ಮೇರೆಗೆ ಆತ ಸದರಿ ಚೆಕ್ಕನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕಗೆ ನೀಡಿದಾಗ ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯಲ್ಲಿ **"ಸಾಕಷ್ಟು ಹಣ ಇಲ್ಲ"** ಎಂಬ ಹಿಂಬರಹದೊಂದಿಗೆ ದಿಃ 24.07.2023 ರಂದು ವಾಪಾಸ್ಸಾಗಿದ್ದು, ನಂತರ ಪಿರ್ಯಾದುದಾರರು ನಿಮಗೆ ದಿ.02.08.2023 ರಂದು ತಮ್ಮ ವಕೀಲರ ಮೂಲಕ ನೋಟೀಸನ್ನು ನೀಡಿದ್ದು, ಸದರಿ ನೋಟೀಸು ದಿಃ 03.08.2023 ರಂದು ಜಾರಿಯಾದರೂ ಸಹ ನೀವು ಇಲ್ಲಿಯವರೆಗೂ ಸದರಿ ಚೆಕ್ಕಿನ ಹಣವನ್ನು ಪಾವತಿ ಮಾಡಿರುವುದಿಲ್ಲ ಹಾಗೂ ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದಿದ್ದರೂ ಸಹ ಪಿರ್ಯಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕನ್ನು ನೀಡಿದ್ದೀರಿ ಹಾಗೂ ನಂತರವು ಕೂಡಾ ಸದರಿ ಹಣವನ್ನು ಮರುಪಾವತಿ ಮಾಡದೆ **ನೆಗೋಷಿಯೇಬಲ್ ಇನ್ಸಟ್ರೂಮೆಂಟ ಆ್ಯಕ್ಟನ ಕಲಂ.138** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರ 1) ಈ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ?

ಉಃ

ಪ್ರ 2) ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕೆ?

ಉಃ

( ಸದರಿ ಆಪಾದನೆಯನ್ನು ಆರೋಪಿಗೆ ಓದಿ ತಿಳಿಸಿ, ಅವರು ಕೊಟ್ಟ ಸಂಪೂರ್ಣ ಹಾಗೂ ಸರಿಯಾದ ಉತ್ತರವನ್ನು ಅಭಿಲೇಖಿಸಿಕೊಳ್ಳಲಾಗಿದೆ.)

ದಿನಾಂಕ 21.10.2023.
ಧಾರವಾಡ

4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ,. ಧಾರವಾಡ.